# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
# ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 6983/10/31/2016(B-3)**

**ದಿನಾಂಕ: 27-07-2021**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

**ಶ್ರೀ ವಿಜಯ ಕುಮಾರ್**
**ನಂ.777, 19ನೇ ಮೇನ್, 22 'ಎ' ಕ್ರಾಸ್,**
**ಹೆಚ್.ಎಸ್.ಆರ್ ಲೇಔಟ್, ಸೆಕ್ಟರ್-2,**
**ಬೆಂಗಳೂರು-560012.**

## ಆದೇಶ

ಶ್ರೀ ವಿಜಯ್ ಕುಮಾರ್ ರವರು ದಿನಾಂಕ.05.12.2016 ರಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಸಹಾಯವಾಣಿ ಮೂಲಕ ದೂರು ಸಲ್ಲಿಸಿದ್ದು, ದೂರಿನ ಸಾರಾಂಶವೇನೆಂದರೆ ದೂರುದಾರರ ಭಾವಮೈದುನನಾದ ಶ್ರೀ ಮಂಜುನಾಥ ಎಂಬುವವರನ್ನು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪೊಲೀಸರು ದಿನಾಂಕ.03.12.2016 ರಂದು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಹಾಗೂ ಹೆಚ್.ಎಸ್.ಆರ್ ಲೇಔಟ್ ಠಾಣೆಯ ಪಿ.ಐ ಶ್ರೀ ವಿಕ್ಟರ್ ಸೈಮನ್ ರವರನ್ನು ಕೇಳಿದಾಗ ಮಂಜುನಾಥನ ಮೇಲೆ ಡಕಾಯಿತಿ ಹಾಗೂ ಹುಡುಗಿಯರನ್ನು ಚುಡಾಯಿಸುವುದರ ಬಗ್ಗೆ ಕೇಸ್ ಆಗಿದೆ ಎಂದು ಹೇಳಿದ್ದು, ಮಂಜುನಾಥನನ್ನು ನಡೆಯಲು ಆಗದ ರೀತಿಯಲ್ಲಿ ಹೊಡೆದಿರುತ್ತಾರೆ. ದಿನಾಂಕ.05.12.2016ರವರೆಗೆ ಮಂಜುನಾಥನನ್ನು ಅಕ್ರಮ ಬಂಧನದಲ್ಲಿಟ್ಟುಕೊಂಡು ಕೋರ್ಟಿಗೂ ಹಾಜರುಪಡಿಸದೆ, ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿರುತ್ತಾರೆಂದು ಆಪಾದಿಸಿರುತ್ತಾರೆ.

ದೂರಿನ ಬಗ್ಗೆ ಪೊಲೀಸ್ ಠಾಣೆಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸುವಂತೆ ಆಯೋಗದ ತನಿಖಾ ವಿಭಾಗದ ಐ.ಜಿ.ಪಿ ರವರಿಗೆ ಆದೇಶಿಸಿದ್ದು, ದಿನಾಂಕ.05.12.2016 ಸಂಜೆ 06.45 ಗಂಟೆಗೆ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲಿಸಿ ದಾಖಲಾತಿಗಳನ್ನು ಪಡೆದು ಸದರಿ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಿನಾಂಕ.05.12.2016 ರಂದು ಮಧ್ಯಾಹ್ನ 1.00ಗಂಟೆಗೆ ನೊಂದ ವ್ಯಕ್ತಿ ಮಂಜುನಾಥನ ಮೇಲೆ ಲಘು ಪ್ರಕರಣ ಸಂಖ್ಯೆ.532/2016 ಕಲಂ 92 (ಓ & ಆರ್)

ಕೆ.ಪಿ. ಆಕ್ಟ್ ರೀತ್ಯ ಲಘು ಪ್ರಕರಣ ದಾಖಲಿಸಿರುವ ಬಗ್ಗೆ ನಮೂದು ಮಾಡಿರುವುದು ಕಂಡು ಬಂದಿರುತ್ತದೆ.

ಅರ್ಜಿದಾರರು ತಮ್ಮ ದೂರು ಹಾಗೂ ಹೇಳಿಕೆಯಲ್ಲಿ ತಮ್ಮ ಭಾವಮೈದುನ ಶ್ರೀ ಮಂಜುನಾಥರವರನ್ನು ಹೆಚ್.ಎಸ್.ಆರ್ ಲೇಔಟ್ ಪೊಲೀಸರು ದಿನಾಂಕ.03.12.2016 ರಂದು ರಾತ್ರಿ 11.00 ಗಂಟೆಗೆ ಕರೆದುಕೊಂಡು ಹೋಗಿ ದಿನಾಂಕ.05.12.2016 ರಂದು 06.30 ಸಂಜೆಯವರೆಗೆ ಅಕ್ರಮ ಬಂಧನದಲ್ಲಿಟ್ಟುಕೊಂಡಿರುತ್ತಾರೆ. ಅಲ್ಲದೆ ಮಂಜುನಾಥನ ಜೊತೆಗೆ ತಮ್ಮ ಮಾವನ ಮಗ ಶಿವರಾಂ ಪ್ರಸಾದ್ ರವರನ್ನು ಸಹ ದಿನಾಂಕ.03.12.2016 ರಂದು ರಾತ್ರಿ ಠಾಣೆಗೆ ಕರೆ ತಂದಿರುತ್ತಾರೆ ಎಂದು ಆಪಾದಿಸಿರುತ್ತಾರೆ. ಆದರೆ ಶ್ರೀ ಶಿವರಾಂ ಪ್ರಸಾದ್ ರವರು ತಮ್ಮ ಹೇಳಿಕೆಯಲ್ಲಿ ದಿನಾಂಕ.03.12.2016 ರಂದು ತಾನು ಮನೆಯಲ್ಲಿಯೇ ಇದ್ದು, ದಿನಾಂಕ.03.12.2016 ರಂದು ರಾತ್ರಿ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಹೊಯ್ಸಳ ಪೊಲೀಸರು ತನ್ನನ್ನು ನೊಂದ ವ್ಯಕ್ತಿ ಮಂಜುನಾಥ ರವರ ಜೊತೆ ಠಾಣೆಗೆ ಕರೆದುಕೊಂಡು ಹೋಗಿ ತನಗೆ ಲಾಕಪ್‌ನಲ್ಲಿ ಹೊಡೆಯುವಾಗ ಮಂಜುನಾಥ ರವರ ಜೊತೆ ಇದ್ದೆ ಎಂಬುದನ್ನು ನಿರಾಕರಿಸಿರುತ್ತಾರೆ. ಮಂಜುನಾಥನನ್ನು ದಿನಾಂಕ.03.12.2016 ರಂದು ಹೆಚ್.ಎಸ್.ಆರ್ ಲೇಔಟ್ ಪೊಲೀಸರು ಠಾಣೆಗೆ ಕರೆದುಕೊಂಡು ಹೋಗಿ ಅಕ್ರಮ ಬಂಧನದಲ್ಲಿಟ್ಟಿರುತ್ತಾರೆ ಎಂದು ತಿಳಿದು ಬಂದ ಮೇರೆಗೆ ತಾನು ದಿನಾಂಕ.04.12.2016 ರಂದು ಮಧ್ಯಾಹ್ನದ ವೇಳೆಗೆ ಠಾಣೆಗೆ ಹೋಗಿ ಠಾಣೆಯಲ್ಲಿದ್ದ ಮಂಜುನಾಥನನ್ನು ನೋಡಿಕೊಂಡು ಬಂದಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಈ ವಿಷಯದಲ್ಲಿ ಅರ್ಜಿದಾರರ ಹಾಗೂ ಶ್ರೀ ಶಿವರಾಂ ಪ್ರಸಾದ್ ರವರ ಹೇಳಿಕೆಗಳಲ್ಲಿ ಭಿನ್ನತೆ ಕಂಡು ಬಂದಿರುತ್ತದೆ.

ಶ್ರೀ ವಿಜಯ್ ಕುಮಾರ್, ಕು॥ ಅನುಪಮ ಹಾಗೂ ನೊಂದವ್ಯಕ್ತಿ ಮಂಜುನಾಥ ಇವರುಗಳು ತಮ್ಮ ಹೇಳಿಕೆಗಳಲ್ಲಿ ಮಂಜುನಾಥ ರವರನ್ನು ಹೆಚ್.ಎಸ್.ಆರ್ ಲೇಔಟ್ ಪೊಲೀಸರು ದಿನಾಂಕ.03.12.2016 ರಿಂದಲೇ ಅಕ್ರಮ ಬಂಧನದಲ್ಲಿ ಇರಿಸಿರುತ್ತಾರೆ ಎಂದು ತಿಳಿಸಿದ್ದು, ಆದರೆ ಶ್ರೀ ರಮೇಶ್ ಹಾಗೂ ಶ್ರೀ ಪೊನ್ನಯ್ಯ ಮತ್ತು ಶ್ರೀ ಕುಬೇರಪ್ಪ ಇವರುಗಳು ತಮ್ಮ ಹೇಳಿಕೆಗಳಲ್ಲಿ ಶ್ರೀ ಮಂಜುನಾಥ ರವರನ್ನು ಹೆಚ್.ಎಸ್.ಆರ್ ಲೇಔಟ್ ಪೊಲೀಸರು ದಿನಾಂಕ.03.12.2016 ರಂದು ರಾತ್ರಿ 11.00 ಗಂಟೆಗೆ ಕರೆದುಕೊಂಡು ಹೋಗಿರುವ ಬಗ್ಗೆ ತಮಗೆ ವಿಜಯ್‌ಕುಮಾರ್ ಮತ್ತು ಕು॥ ಅನುಪಮಾ ರವರಿಂದ ತಿಳಿದು ಬಂದಿದ್ದು, ಈ ಬಗ್ಗೆ ನಾವುಗಳು ದಿನಾಂಕ.04.12.2016 ರಂದು ಬೆಳಿಗ್ಗೆ 7–30 ಗಂಟೆಗೆ ಹಾಗೂ ದಿನಾಂಕ.05.12.2016 ರಂದು ಠಾಣೆಗೆ ಹೋಗಿ ಮಂಜುನಾಥ ರವರಿಗೆ ಊಟ ತಿಂಡಿ ಕೊಡಿಸಿ, ಠಾಣೆಯಲ್ಲಿಯೇ ಇದ್ದ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ರವರೊಂದಿಗೆ

ಮಾತನಾಡಿ ದಿನಾಂಕ. 05.12.2016ರ ಸಂಜೆ 06.30 ಗಂಟೆಗೆ ಠಾಣೆಯಿಂದ ಬಿಡಿಸಿಕೊಂಡು ಬಂದಿರುವುದಾಗಿ ತಮ್ಮ ಹೇಳಿಕೆಗಳಲ್ಲಿ ತಿಳಿಸಿರುವುದು ಕಂಡು ಬಂದಿರುತ್ತದೆ.

ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದು, ಇವರ ಹೇಳಿಕೆಯಲ್ಲಿ ನೊಂದ ವ್ಯಕ್ತಿ ಮಂಜುನಾಥನನ್ನು ದಿನಾಂಕ.05.12.2016 ರಂದು ಬೆಳಿಗ್ಗೆ 10.30 ಗಂಟೆಗೆ ಠಾಣೆಯ ಎ.ಎಸ್.ಐ ಶಿವಣ್ಣ ರವರು ಠಾಣೆಗೆ ಕರೆತಂದು ಲಿಖಿತ ವರದಿಯನ್ನು ನೀಡಿದ ಮೇರೆಗೆ ಎ.ಎಸ್.ಐ ಚನ್ನೇಗೌಡ ರವರು ಲಘು ಪ್ರಕರಣ ಸಂಖ್ಯೆ.532/2016 ಕಲಂ 92 (ಓ & ಆರ್) ಕೆ.ಪಿ. ಆಕ್ಟ್ ರೀತ್ಯ ನೋಟೀಸ್ ಜಾರಿ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದರೆ, ದಿನಚರಿಯನ್ನು ಪರಿಶೀಲಿಸಲಾಗಿ ದಿನಾಂಕ.05.12.2016 ರಂದು ಮಧ್ಯಾಹ್ನ 1.00 ಗಂಟೆಗೆ ನೊಂದ ವ್ಯಕ್ತಿ ಮಂಜುನಾಥನನ್ನು ಪರಂಗಿ ಪಾಳ್ಯದ ಮಾರಮ್ಮ ದೇವಸ್ಥಾನದ ಹತ್ತಿರ ಇರುವ ಬೇಕರಿ ಬಳಿಯಿಂದ ಎ.ಎಸ್.ಐ ಶ್ರೀ ಶಿವಣ್ಣ ರವರು ಠಾಣೆಗೆ ಕರೆತಂದಂತೆಯೂ, ಠಾಣೆಯಲ್ಲಿ ನೊಂದ ವ್ಯಕ್ತಿ ಮಂಜುನಾಥನ ವಿರುದ್ಧ ಎ.ಎಸ್.ಐ ಚನ್ನೇಗೌಡ ರವರು ಲಘು ಪ್ರಕರಣ ಸಂಖ್ಯೆ:532/2016 ಕಲಂ 92 (ಓ & ಆರ್) ಕೆ.ಪಿ. ಆಕ್ಟ್ ರೀತ್ಯ ಲಘು ಪ್ರಕರಣ ದಾಖಲಿಸಿರುವುದಾಗಿ ನಮೂದು ಇರುತ್ತದೆ. ಹಾಗೂ ಲಘು ಪ್ರಕರಣದ ರಿಜಿಸ್ಟರ್‌ನಲ್ಲಿಯೂ ಸಹ ನಮೂದು ಇರುವುದು ಕಂಡು ಬಂದಿರುತ್ತದೆ. ನೊಂದ ವ್ಯಕ್ತಿ ಮಂಜುನಾಥ ರವರನ್ನು ದಿನಾಂಕ.05.12.2016 ರಂದು ಮಧ್ಯಾಹ್ನ 1.00 ಗಂಟೆಗೆ ಠಾಣೆಗೆ ಕರೆ ತಂದಾಗ ಅವರ ಮೈಮೇಲೆ ಆಗಿರುವ ಗಾಯಗಳ ಬಗೆ ಆಗಲೀ ಹಾಗೂ ಠಾಣೆಯಿಂದ ಯಾವ ಸಮಯಕ್ಕೆ ಬಿಟ್ಟು ಕಳುಹಿಸಿರುತ್ತಾರೆ, ಯಾರ ಜೊತೆ ಕಳುಹಿಸಿರುತ್ತಾರೆ ಎಂಬ ಬಗ್ಗೆ ಠಾಣಾ ದಾಖಲಾತಿಗಳಲ್ಲಿ ಯಾವುದೇ ನಮೂದು ಮಾಡಿರುವುದು ಕಂಡು ಬಂದಿರುವುದಿಲ್ಲ.

ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪಿ.ಐ ಶ್ರೀ ವಿಕ್ಟರ್ ಸೈಮನ್ ರವರು ತಮ್ಮ ಹೇಳಿಕೆಯಲ್ಲಿ ದಿನಾಂಕ.05.12.2016 ರಂದು ಬೆಳಿಗ್ಗೆ 09.35 ಗಂಟೆಗೆ ಠಾಣೆಯಿಂದ ತೆರಳಿ ರಾತ್ರಿ ಸುಮಾರು 08.30 ಗಂಟೆಗೆ ಮರಳಿ ಠಾಣೆಗೆ ಬಂದಿದ್ದು, ಈ ಅವಧಿಯಲ್ಲಿ ವಿಜಯ್‌ಕುಮಾರ್ ರವರನ್ನು ಭೇಟಿ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಠಾಣಾ ದಿನಚರಿಯನ್ನು ಪರಿಶೀಲಿಸಲಾಗಿ ಇನ್ಸ್‌ಪೆಕ್ಟರ್ ರವರು ದಿನಾಂಕ.03.12.2016, 04.12.2016 ಮತ್ತು 05.12.2016 ರಂದು ಠಾಣೆಗೆ ಬಂದಿರುವುದು, ಹೊರಹೋಗಿರುವುದು ದಿನಚರಿಯಲ್ಲಿ ನಮೂದಿಸಿರುವುದು ಕಂಡು ಬಂದಿರುತ್ತದೆ. ಮತ್ತು ಶ್ರೀ ವಿಜಯ್‌ಕುಮಾರ್, ಶ್ರೀ ರಮೇಶ್, ಶ್ರೀ ಪೊನ್ನಯ್ಯ, ಶ್ರೀ ಕುಬೇರಪ್ಪ ಮತ್ತು ಶ್ರೀ ಮಂಜುನಾಥ ಇವರುಗಳ ಹೇಳಿಕೆಯಿಂದಲೂ ಕಂಡು ಬಂದಿರುತ್ತದೆ.

ನೊಂದ ವ್ಯಕ್ತಿ ಶ್ರೀ ಮಂಜುನಾಥ ಈತನು ತನ್ನ ಹೇಳಿಕೆಯಲ್ಲಿ ದಿನಾಂಕ.05.12.2016ರಂದು ತಮ್ಮ ಮಾವ ಶ್ರೀ ವಿಜಯ್‌ಕುಮಾರ್, ತಮ್ಮ ತಾಯಿ ಹಾಗೂ ತಾತ ರವರು ಮಂಜುನಾಥನನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದು, ಆ ಸಮಯದಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಪೊಲೀಸರು ಬಂದು ವಿಚಾರಣೆ ಮಾಡಿ ಬರೆದುಕೊಂಡು ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿಸಿಕೊಂಡು ಫೋಟೋ ತೆಗೆದುಕೊಂಡು ಹೋಗಿರುತ್ತಾರೆ. ನಂತರ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರು ಚಿಕಿತ್ಸೆ ನೀಡಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ತಮ್ಮ ಮಾವ ವಿಲ್ಸನ್ ಗಾರ್ಡನ್‌ನ ಅಗಡಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ವಿಕ್ಟೋರಿಯಾ ಆಸ್ಪತ್ರೆಯ ಪೊಲೀಸ್ ಠಾಣೆಯ ದಾಖಲಾತಿಗಳನ್ನು ಪರಿಶೀಲಿಸಿದಾಗ ಅದರಲ್ಲಿ ದಿನಾಂಕ.05.12.2016 ರಂದು ರಾತ್ರಿ 9.55 ಗಂಟೆಯಲ್ಲಿ ಒಂದು ನಮೂದು ಇದ್ದು, ಅದರಲ್ಲಿ "ದಿನಾಂಕ.03.12.2016 ರಂದು ನೊಂದ ವ್ಯಕ್ತಿ ಮಂಜುನಾಥ ರವರಿಗೆ ಹೊಯ್ಸಳ ಸಿಬ್ಬಂದಿಯವರು ಠಾಣೆಗೆ ಕರೆದುಕೊಂಡು ಹೋಗಿ ಠಾಣೆಯಲ್ಲಿ ಸಿಂಗಲ್ ಸ್ಟಾರ್ ಹಾಗೂ ಇತರರು ಹೊಡೆದಿರುತ್ತಾರೆ ಎಂದು ಮಂಜುನಾಥ ರವರು ತಿಳಿಸಿರುತ್ತಾರೆ" ಎಂಬ ನಮೂದು ಇರುತ್ತದೆ. ಹಾಗೂ ಮೆಮೋವನ್ನು ದಿನಾಂಕ.06.12.2016 ರಂದು 01.00 ಎಎಂ ಸಮಯದಲ್ಲಿ ಹೆಚ್.ಸಿ.–6355 ರವರು ತೆಗೆದುಕೊಂಡು ಹೋಗಿದ್ದು, "ಪಿ.ಐ. ಶ್ರೀ ವಿಕ್ಟರ್ ಸೈಮನ್ ರವರಿಗೆ ತಿಳಿಸಿದೆ." ಎಂದು ನಮೂದು ಇರುವುದು ಕಂಡು ಬಂದಿರುತ್ತದೆ. ನೊಂದ ವ್ಯಕ್ತಿ ಮಂಜುನಾಥ ರವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಇದ್ದ ಎಂ.ಎಲ್.ಸಿ ಮೆಮೋವನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಹೆಚ್.ಸಿ.6355 ಶ್ರೀ ಸಿದ್ದಪ್ಪ ರವರು ಪಡೆದು ಠಾಣೆಯ ಪ್ರಭಾರದಲ್ಲಿದ್ದ ಹೆಚ್.ಸಿ.–5844 ಶ್ರೀ ದೊಡ್ಡ ವೀರಪ್ಪ ರವರಿಗೆ ನೀಡಿದ್ದು, ಈ ಬಗ್ಗೆ ಹೆಚ್.ಎಸ್.ಆರ್. ಲೇಔಟ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ರವರು ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡು ಬಂದಿರುತ್ತದೆ. ಪ್ರಕರಣದಲ್ಲಿನ ನೊಂದ ವ್ಯಕ್ತಿ ಶ್ರೀ ಮಂಜುನಾಥ ರವರು ದಿನಾಂಕ.06.12.2016, 12.16 ಎ.ಎಂ ಗಂಟೆಯಿಂದ 14.12.2016 ಮದ್ಯಾಹ್ನ 03.29 ಗಂಟೆಯವರೆಗೆ ವಿಲ್ಸನ್‌ಗಾರ್ಡನ್‌ನಲ್ಲಿ ಇರುವ ಅಗಡಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಾತಿ ಚಿಕಿತ್ಸೆ ಪಡೆದಿದ್ದು, ಈ ಬಗ್ಗೆ ಅಗಡಿ ಆಸ್ಪತ್ರೆಯ ವೈದ್ಯರು "ದಿನಾಂಕ.03.12.2016 ರಂದು ರಾತ್ರಿ 10.30 ಗಂಟೆಗೆ ಹೆಚ್.ಎಸ್.ಆರ್ ಲೇಔಟ್ ಪೊಲೀಸರು ನೊಂದ ವ್ಯಕ್ತಿ ಮಂಜುನಾಥನ ಮೇಲೆ ಹಲ್ಲೆ ಮಾಡಿದ್ದರಿಂದ ಉಂಟಾಗಿರುವ ಗಾಯಗಳಾಗಿದ್ದು, ಈ ಗಾಯಗಳು 3–4 ದಿನಗಳಷ್ಟು ಹಳೆಯ ಗಾಯಗಳು" ಎಂದೂ "It is possible to sustain the injuries mentioned in the wound certificate due to Blunt Force Impact" ಎಂದು ವೈದ್ಯರು ನೀಡಿರುವ ದಿನಾಂಕ.27.12.2016 ರ ಗಾಯದ ಪ್ರಮಾಣ ಪತ್ರದಲ್ಲಿ ಕಂಡು ಬಂದಿರುತ್ತದೆ.

ವಿಚಾರಣಾ ಕಾಲದಲ್ಲಿ ಸಂಗ್ರಹಿಸಿದ ಮೇಲ್ಕಂಡ ಎಲ್ಲಾ ಹೇಳಿಕೆಗಳು ಹಾಗೂ ದಾಖಲಾತಿಗಳಿಂದ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ವಿಕ್ಟರ್ ಸೈಮನ್ ಹಾಗೂ ಸಿಬ್ಬಂದಿಗಳು ನೊಂದವ್ಯಕ್ತಿ ಮಂಜುನಾಥನನ್ನು ದಿನಾಂಕ.03.12.2016 ರಂದು ರಾತ್ರಿ 11.00 ಗಂಟೆಯಿಂದ ದಿನಾಂಕ.05.12.2016 ರಂದು ಸಂಜೆ 6.30 ರವರೆಗೆ ಠಾಣೆಯಲ್ಲಿ ಅಕ್ರಮ ಬಂಧನದಲ್ಲಿರಿಸಿ ಹಲ್ಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಎಂಬ ಅಭಿಪ್ರಾಯ ವರದಿಯನ್ನು ಡಿವೈ.ಎಸ್.ಪಿ ರವರು ನೀಡಿದ ವಿವರವಾದ ವರದಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಲಗತ್ತಿಸಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಅವರು ಆಯೋಗಕ್ಕೆ ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ಜಾರಿ ಆಗಿ ಸ್ವೀಕೃತಿ ಬಂದಿದೆ. ಆದರೆ, ಅಭಿಪ್ರಾಯ ಸಲ್ಲಿಸಿರುವುದಿಲ್ಲ.

ದೂರು ಮತ್ತು ವರದಿಯನ್ನು ಪರಿಶೀಲಿಸಲಾಗಿ, ನೊಂದ ವ್ಯಕ್ತಿ ಶ್ರೀ ಮಂಜುನಾಥ ಅವರನ್ನು ಹೆಚ್.ಎಸ್.ಆರ್. ಲೇಔಟ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ಹಾಗೂ ಸಿಬ್ಬಂದಿಗಳು ದಿನಾಂಕ.03.12.2016 ರಂದು ರಾತ್ರಿ 11.00 ಗಂಟೆಯಿಂದ ದಿನಾಂಕ.05.12.2016ರ ಸಂಜೆ 06.30ರ ವರೆಗೆ ಠಾಣೆಯಲ್ಲಿ ಅಕ್ರಮ ಬಂಧನದಲ್ಲಿರಿಸಿ, ಹಲ್ಲೆ ಮಾಡಿರುವುದು ಆಯೋಗದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರ ವರದಿಯಿಂದ ಕಂಡು ಬಂದಿರುತ್ತದೆ. ಆದುದರಿಂದ, ಘಟನೆಗೆ ಸಂಬಂಧಪಟ್ಟಂತೆ, ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್, ಶಿವಣ್ಣ ಎ.ಎಸ್.ಐ ಮತ್ತು ಶ್ರೀ ದ್ಯಾವಪ್ಪ ಪಿ.ಸಿ 6565, ಅವರ ಮೇಲೆ ಕೆ.ಎಸ್.ಪಿ (ಡಿಪಿ) ನಿಯಮಾವಳಿಗಳು 1965 ಅಡಿ ಶಿಸ್ತು ಕ್ರಮ ಯಾಕೆ ಜರುಗಿಸಬಾರದು ಎಂಬ ಬಗ್ಗೆ ಹೇಳುವುದೇನಾದರೂ ಇದ್ದಲ್ಲಿ ಆಯೋಗದ ಮುಂದೆ ಖುದ್ದು ಹಾಜರಾಗಿ ಲಿಖಿತ ಸಮಜಾಯಷಿಯನ್ನು ಸಲ್ಲಿಸುವಂತೆ ಪಿ.ಹೆಚ್.ಆರ್ ಆಕ್ಟ್ ಕಲಂ 16 ರ ಅಡಿ ಕಾರಣ ಕೇಳುವ ನೋಟೀಸ್ ಕಳುಹಿಸಿದ್ದು ಹಾಗೂ ದೂರುದಾರರಾದ ಶ್ರೀ ವಿಜಯಕುಮಾರ್ ರವರಿಗೂ ಆಯೋಗದ ಮುಂದೆ ಖುದ್ದಾಗಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದು, ದಿನಾಂಕ.21.09.2020 ರಂದು ಶ್ರೀ ವಿಕ್ಟರ್ ಸೈಮನ್ ಪಿ.ಐ, ಬಿ.ಎಂ.ಟಿ.ಎಫ್, ಬೆಂಗಳೂರು ಶ್ರೀ ಶಿವಣ್ಣ, ನಿವೃತ್ತ ಎ.ಎಸ್.ಐ ಹಾಗೂ ದೂರುದಾರರಾದ ಶ್ರೀ ವಿಜಯ್ ಕುಮಾರ್ ರವರು ಆಯೋಗದ ಮುಂದೆ ಹಾಜರಿದ್ದು, ದೂರುದಾರರು ಅವರ ಹೇಳಿಕೆಯನ್ನು ನೀಡಿರುತ್ತಾರೆ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಶ್ರೀ ವಿಕ್ಟರ್ ಸೈಮನ್ ರವರು ಅವರ ಲಿಖಿತ ಸಮಜಾಯಿಷಿ ನೀಡಿದ್ದು ಹಾಗೂ ನಿವೃತ್ತ ಎ.ಎಸ್.ಐ ಶ್ರೀ ಶಿವಣ್ಣರವರು ಆಯೋಗದ ಡಿವೈ.ಎಸ್.ಪಿ ರವರ ಮುಂದೆ ನೀಡಿದ ಹೇಳಿಕೆಯೇ ನನ್ನ ಹೇಳಿಕೆಯಾಗಿರುತ್ತದೆಂದು ನುಡಿದಿರುತ್ತಾರೆ.

<u>ದಿನಾಂಕ.21.09.2020 ರಂದು ಆಯೋಗದ ಮುಂದೆ ದೂರುದಾರರಾದ ಶ್ರೀ ವಿಜಯ್‌ಕುಮಾರ್ ರವರು ನೀಡಿರುವ ಹೇಳಿಕೆ ಕೆಳಕಂಡಂತೆ ಇದೆ:</u>

"On 03.02.2016 at about 11.20 P.M, I received a call from my sister's daughter Kumari Anupama that Sri. Manjunath, younger brother of Anupama has been taken by HSR Layout Police, Bengaluru and she requested me to go to Police Station and find out what for he has been taken to the Police Station. Then I went to HSR Police Station. There were two Police personnel whose names I do not know. I asked one of them who was a Daffedar about Sri Manjunath. The Daffedar told me that Sri Manjunath has been brought but what for he has been brought he does not know and asked me to come the next day in the morning and check with the Inspector. The next day, i.e., on 04.12.2016 I had gone to the Police Station around 07.30 A.M along with DSS Leader Sri. Ramesh. At that time the Inspector of Police had not come to the station. I then sent breakfast to Sri Manjunath through the police. The Inspector of Police Sri Victor Simon arrived at the Police Station around 11.30 A.M I then asked the Inspector of Police as to why Sri Manjunath has been brought to the Police Station. The Inspector of Police did not tell me the reason and said that he will tell the reason. After that, the Inspector of Police told me to come in the evening. I then left the Police Station and came back to the Police Station once again at around 05.30 P.M and waited for the Inspector to come. The Inspector of Police came at 08.00 P.M and I did not get the opportunity to speak to the Inspector of Police. The other police personnel in the police station told me to come next day.

On 05.12.2016 at 10.30 A.M I went to the Police Station with DSS Leader Sri. Ramesh and Ponnaiah. My sister Smt Anjali was also with me. I asked the police personnel about the reason Sri Manjunath has been brought. The Police Personnel asked me to wait. After sometime Sri Victor Simon, Inspector of Police came to Police Station at around 12.00 and 1.30 P.M and I spoke to the Inspector of Police and told him that if Manjunath has committed any mistake he may be excused and left giving him a chance. The Inspector of Police asked me to sit down. After ten minutes of discussion, Sri Manjuath was taken to the first floor of Police Station and after twenty minutes he was brought down. When he was brought down Sri Manjuath was not able to walk as he was severely beaten.

I then told my sister's daughter Kumari Anupama about this and told her to file a complaint with Human Rights

Commission that Sri Manjuath has been severely beaten up and he is not in a position to walk. After this my sister's daughter Kumari Anupama called up the Karnataka State Human Rights Commission and filed a complaint. When the complaint was lodged Kumari Anupama got reply that the Human Rights Commission Officials would visit Police Station at 03.00 P.M and asked her to wait at the Police Station. As the Officials of Karnataka State Human Rights Commission did not turn up, Kumari Anupama called up Human Rights Commission at around 05.00 P.M and got the reply that the Officials are on the way and they are held up in traffic. I waited at the Police Station till 05.45 P.M. Thereafter as Sri. Manjuanth was not able to walk, the police told me to take away Sri Manjunath. I then, took Sri Manjunath out of the Police Station and took him to Victoria Hospital for treatment. The Doctor asked me the details and it was informed that he has been assaulted by the HSR Layout Police. The doctor at Victoria Hospital told me that Sri Manjunath requires more treatment and it is better he is taken to a good hospital. I then took Sri Manjunath from Victoria Hospital to Agadi Hospital and Research Centre at Wilson Garden by which time it was 08.30 P.M and got him admitted there and then I left for home at around 10.30-11.00 P.M.

On being asked about Sri Shivaram Prasad and the statement given by him before the Commission, I state that Sri Shivaram Prasad was present on 03.12.2016 in HSR Layout Police Station when I had been to HSR Layout Police Station around 11.45 P.M. He was also present on 04.12.2016 and that Sri Shivaram Prasad was left on 05.12.2016 at 10.30 A.M. I thought that the police would release Sri Manjunath also but the police did not release Sri Manjunath."

ಅಂದಿನ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಶ್ರೀ ವಿಕ್ಟರ್ ಸೈಮನ್(ಇಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಎಂ.ಟಿ.ಎಫ್)ರವರ ಲಿಖಿತ ಸಮಜಾಯಿಷಿಯಲ್ಲಿ ದಿನಾಂಕ.05.12.2016 ರಂದು ಸುಮಾರು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣಾ ಸರಹದ್ದಿನ ಪರಂಗಿಪಾಳ್ಯದ ಮುಖ್ಯರಸ್ತೆಯಲ್ಲಿರುವ ಮಾರಮ್ಮ ದೇವಸ್ಥಾನದ ಸಮೀಪ, ಶ್ರೀ ಮಂಜುನಾಥನು(ನೊಂದ ವ್ಯಕ್ತಿ) ಸಾರ್ವಜನಿಕರನ್ನು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದು, ಸಾರ್ವಜನಿಕರ ನೆಮ್ಮದಿಗೆ ಭಂಗ ಉಂಟು ಮಾಡುತ್ತಿದ್ದ ಮಾಹಿತಿಯನ್ನು ತಿಳಿದು ಆತನನ್ನು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣಾ ಸಿಬ್ಬಂದಿಯವರಾದ ಎ.ಎಸ್.ಐ ಶ್ರೀ ಶಿವಣ್ಣ(ನಿವೃತ್ತ) ಮತ್ತು

ಪಿಸಿ–6565 ಶ್ರೀ ದ್ಯಾವಪ್ಪ ರವರುಗಳು ಠಾಣೆಗೆ ಕರೆತಂದು ಠಾಣಾಧಿಕಾರಿ ಶ್ರೀ ಚನ್ನೇಗೌಡ, ಎ.ಎಸ್.ಐ ರವರ ಎದುರು ಹಾಜರುಪಡಿಸಿ ಮುಂದಿನ ಕ್ರಮ ಜರುಗಿಸುವ ಸಲುವಾಗಿ ಲಿಖಿತ ವರದಿಯನ್ನು ಸಲ್ಲಿಸಿದ್ದು, ಠಾಣಾಧಿಕಾರಿಗಳು ವರದಿಯನ್ನು ಸ್ವೀಕರಿಸಿ ಶ್ರೀ ಮಂಜುನಾಥ ರವರ ವಿರುದ್ಧ ಕಲಂ 92(ಓ) ಮತ್ತು (ಆರ್) ಕೆ.ಪಿ. ಆಕ್ಟ್ ಅಡಿಯಲ್ಲಿ ಪೊಲೀಸ್ ನೋಟೀಸ್ ಜಾರಿ ಮಾಡಿದ ನಂತರ ಸದರಿ ಮಂಜುನಾಥ ರವರ ವಿರುದ್ಧ ಒಂದು ಲಘು ಪ್ರಕರಣ ಸಂಖ್ಯೆ.532/216 ರೀತ್ಯ ದಾಖಲಿಸಿದ್ದು, ಜರುಗಿಸಿದ ಕ್ರಮದ ಬಗ್ಗೆ ಠಾಣಾ ದಿನಚರಿಯಲ್ಲಿ ವಿವರವಾಗಿ ನಮೂದು ಮಾಡಲಾಗಿದೆ. ಆದರೆ ದೂರಿನಲ್ಲಿ ಹೇಳಿರುವ ಪ್ರಕಾರ ಶ್ರೀ ಮಂಜುನಾಥ ರವರಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಹಾಗೂ ಲಾಕಪ್‌ನಲ್ಲಿ ಇಟ್ಟಿರುವುದಿಲ್ಲ.

ಶ್ರೀ ಮಂಜುನಾಥ ರವರು ಅವರನ್ನು ದಿನಾಂಕ:04.12.2016 ರಂದು ಮಧ್ಯಾಹ್ನ ಸುಮಾರು 12–30 ಗಂಟೆ ಸಮಯದಲ್ಲಿ ಹೆಚ್.ಎಸ್.ಆರ್. ಲೇಔಟ್ ಪೊಲೀಸ್ ಠಾಣಾ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ಹಾಗೂ ಸಿಬ್ಬಂಧಿಗಳು 4ನೇ ಮಹಡಿಗೆ ಕರೆದುಕೊಂಡು ಹೋಗಿ ಕಬ್ಬಿಣದ ರಾಡಿನಿಂದ ಮಂಜುನಾಥ ರವರಿಗೆ ರೋಲರ್ ಮಾಡಿ ಪಾದಗಳಿಗೆ ಲಾಠಿಯಿಂದ ಹೊಡೆದು ಕಾಲಿನಿಂದ ತುಳಿದು, ಎರಡೂ ಕೈಗಳಿಗೆ ಹೊಡೆದು ರಕ್ತ ಹೆಪ್ಪುಗಟ್ಟುವಂತೆ ಮಾಡಿರುತ್ತಾರೆಂದು ಹೇಳಿರುವುದು ಸುಳ್ಳು ಹಾಗೂ ಕಾಲ್ಪನಿಕ ಹೇಳಿಕೆಯಾಗಿರುತ್ತದೆ, ಏಕೆಂದರೆ ಹೆಚ್.ಎಸ್.ಆರ್. ಲೇಔಟ್ ಪೊಲೀಸ್ ಠಾಣಾ ಕಟ್ಟಡದಲ್ಲಿ 4ನೇ ಮಹಡಿಯೇ ಇರುವುದಿಲ್ಲ.

ಶ್ರೀ ವಿಜಯ್‌ಕುಮಾರ್ ರವರು ದಿನಾಂಕ.04.12.2016 ರಂದು ಮಧ್ಯಾಹ್ನ 1.30 ಗಂಟೆಗೆ ನನ್ನನ್ನು ಭೇಟಿ ಮಾಡಿದ್ದಾಗಿ ಅವರ ಹೇಳಿಕೆಯಲ್ಲಿ ತಿಳಿಸಿರುವುದು ಸುಳ್ಳು ಹೇಳಿಕೆಯಾಗಿರುತ್ತದೆ. ಏಕೆಂದರೆ ದಿನಾಂಕ.04.12.2016ರಂದು ಬೆಳಿಗ್ಗೆ 9.35 ಗಂಟೆಗೆ ಠಾಣಾ ಸರಹದ್ದು ಗಸ್ತಿಗೆ ತೆರಳಿ ರಾತ್ರಿ 8.30 ಗಂಟೆಗೆ ವಾಪಸಾಗಿರುತ್ತೇನೆ.

ಶ್ರೀ ಪೊನ್ನಯ್ಯ, ಶ್ರೀ ರಮೇಶ್ ರವರು ಡಿವೈ.ಎಸ್.ಪಿ ಕೆ.ಎಸ್.ಹೆಚ್.ಆರ್.ಸಿ ರವರ ಮುಂದೆ ನೀಡಿದ ಹೇಳಿಕೆಗಳು ದೂರುದಾರರಾದ ಶ್ರೀ ವಿಜಯ್‌ಕುಮಾರ್ ರವರ ಪ್ರೇರಣೆಯಿಂದ ಕೂಡಿದ್ದಾಗಿರುತ್ತದೆ.

ಶ್ರೀ ಕುಬೇರಪ್ಪರವರು ಡಿವೈ.ಎಸ್.ಪಿ ಕೆ.ಎಸ್.ಹೆಚ್.ಆರ್.ಸಿ ರವರ ಮುಂದೆ ನೀಡಿದ ಹೇಳಿಕೆಯಲ್ಲಿ ಅವರು ದಿನಾಂಕ.05.12.2016 ರಂದು ಬೆಳಿಗ್ಗೆ 9.00 ಗಂಟೆಗೆ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಗೆ ಹೋಗಿ ನೋಡಲಾಗಿ ಶ್ರೀ ಮಂಜುನಾಥನು ಸೆಲ್ ನೊಳಗೆ ಇದ್ದು, ಅವನು ಬಟ್ಟೆಗಳನ್ನು ಹಾಕಿಕೊಂಡಿದ್ದರು. ಆದರೆ ಪೊಲೀಸರು ಆತನನ್ನು ಮಾತನಾಡಿಸಲು ಬಿಡಲಿಲ್ಲವಾದ್ದರಿಂದ ಮಧ್ಯಾಹ್ನ

ಊಟವನ್ನು ಹೋಟೆಲ್‌ನಿಂದ ಪಾರ್ಸೆಲ್ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇವೆಂದು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಆದರೆ ಶ್ರೀ ಮಂಜುನಾಥ ರವರು ಡಿವೈ.ಎಸ್.ಪಿ ಕೆ.ಎಸ್.ಹೆಚ್.ಆರ್.ಸಿ ರವರ ಮುಂದೆ ನೀಡಿದ ಹೇಳಿಕೆಯಲ್ಲಿ ದಿನಾಂಕ.05.12.2016 ರಂದು ತನ್ನ ಮಾವನನ್ನು(ವಿಜಯ್‌ಕುಮಾರ್) ಠಾಣೆಯಲ್ಲಿ ಭೇಟಿ ಮಾಡಲು ಬಿಟ್ಟಿರುವುದಿಲ್ಲ. ಆದಕಾರಣ ಪೊಲೀಸರ ಮುಖಾಂತರ ತಿಂಡಿ ತರಿಸಿಕೊಟ್ಟಿರುತ್ತಾರೆಂದು ನುಡಿದಿದ್ದಾರೆ. ಆದರೆ ಈ ಮೂಲಕ ಶ್ರೀ ಕುಬೇರಪ್ಪ ಮತ್ತು ಶ್ರೀ ಮಂಜುನಾಥ ರವರ ಹೇಳಿಕೆಗಳು ಕಾಲ್ಪನಿಕ ಹೇಳಿಕೆಗಳಾಗಿರುತ್ತವೆ.

ಶ್ರೀ ವಿಜಯ್‌ಕುಮಾರ್ ಹಾಗೂ ಶ್ರೀ ಮಂಜುನಾಥ ರವರು ಆಯೋಗದ ಡಿವೈ.ಎಸ್.ಪಿ ರವರ ಮುಂದೆ ನೀಡಿರುವ ಹೇಳಿಕೆಗಳಲ್ಲಿ ದಿನಾಂಕ.03.12.2016 ರಂದು ರಾತ್ರಿ 11–00 ಗಂಟೆಯಿಂದ ದಿನಾಂಕ.05.12.2016ರ ಸಂಜೆ 6–30 ಗಂಟೆಯವರೆಗೆ ಅಕ್ರಮ ಬಂಧನದಲ್ಲಿಟ್ಟಿದ್ದು, ಹಾಗೂ ಅವರ ಮುಂದುವರೆದ ಹೇಳಿಕೆಯಲ್ಲಿ ಶ್ರೀ ಶಿವರಾಂ ಪ್ರಸಾದ್‌ನನ್ನು ಶ್ರೀ ವಿಜಯ್‌ಕುಮಾರ್ ರವರ ಮಾವನ ಮಗ)ಸಹ ದಿನಾಂಕ.03.12.2016ರಂದು ಠಾಣೆಗೆ ಕರೆತಂದಿದ್ದು, ಇಬ್ಬರನ್ನು ಲಾಕಪ್‌ನಲ್ಲಿ ಇಟ್ಟಿರುತ್ತಾರೆಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಆದರೆ ಶ್ರೀ ಶಿವರಾಂ ಪ್ರಸಾದ್ ರವರು ಆಯೋಗದ ಡಿವೈ.ಎಸ್.ಪಿ ರವರ ಮುಂದೆ ನೀಡಿರುವ ಹೇಳಿಕೆಯಲ್ಲಿ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪೊಲೀಸರು ಶ್ರೀ ಶಿವರಾಂ ಪ್ರಸಾದ್ ರವರನ್ನು ಠಾಣೆಗೆ ಕರೆದುಕೊಂಡು ಹೋಗಿಲ್ಲ, ಹಾಗೂ ಠಾಣೆಯ ಲಾಕಪ್‌ನಲ್ಲಿ ಇಟ್ಟಿರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿಕೆ ನೀಡಿರುತ್ತಾರೆ. ಈ ಮೂಲಕ ಶ್ರೀ ಮಂಜುನಾಥ್ ಹಾಗೂ ಶ್ರೀ ವಿಜಯ್‌ಕುಮಾರ್ ರವರು ನೀಡಿರುವ ಹೇಳಿಕೆಗಳು ಸುಳ್ಳಾಗಿರುತ್ತದೆ.

ಶ್ರೀ ವಿಜಯ್‌ಕುಮಾರ್ ರವರು ಬೆಂಗಳೂರು ನಗರದ ಕೋರಮಂಗಲ ಪೊಲೀಸ್ ಠಾಣೆಯ ರೌಡಿಶೀಟರ್ ಆಸಾಮಿಯಾಗಿದ್ದು, ಅಕ್ರಮ ಭೂಮಾಫಿಯಾ, ರೌಡಿಗಳ ಸಂಪರ್ಕ ಹೊಂದಿದ್ದು, ರೌಡಿ ಚಟುವಟಿಕೆಗಳನ್ನು ನಡೆಸುವ ವ್ಯಕ್ತಿಯಾಗಿರುತ್ತಾನೆ. ಈತನು ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸಲು ಕಾನೂನು ರೀತ್ಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ತೀವ್ರ ಅಸಮಾಧಾನ ಹೊಂದಿದ್ದು, ಆಗಾಗ್ಗೆ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ವಿರುದ್ಧ ಅವಕಾಶಗಳು ಸಿಕ್ಕಾಗ ಬೇರೆ ಬೇರೆ ಪ್ರಾಧಿಕಾರಗಳಲ್ಲಿ ಹಾಗೂ ಆಯೋಗಗಳಲ್ಲಿ ಆತನನ್ನು ರಕ್ಷಿಸಿಕೊಳ್ಳಲು ಸುಳ್ಳು ದೂರುಗಳನ್ನು ದಾಖಲಿಸುವ ಹವ್ಯಾಸವನ್ನು ಇಟ್ಟುಕೊಂಡಿರುತ್ತಾನೆ.

ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಶ್ರೀ ವಿಕ್ಟರ್ ಸೈಮನ್ ಹಾಗೂ ಸಿಬ್ಬಂದಿಗಳ ವಿರುದ್ಧ ಮಾಡಿರುವ ಆರೋಪಗಳು, ಅರ್ಜಿದಾರರು ತಮ್ಮ ಅಕ್ರಮ ಚಟುವಟಿಕೆಗಳಿಂದ ತಮ್ಮನ್ನು ತಾವು

ರಕ್ಷಿಸಿಕೊಳ್ಳುಲು ಮಾಡಿರುವ ಸುಳ್ಳು, ಕಾಲ್ಪನಿಕ ಹಾಗೂ ಸೃಷ್ಟಿತ ಆರೋಪಗಳಾಗಿರುತ್ತವೆಂದು ಹಾಗೂ ಸತ್ಯಕ್ಕೆ ದೂರವಾದವುಗಳೆಂದು ಪರಿಗಣಿಸಲು ಅವರ ಲಿಖಿತ ಸಮಜಾಯಿಷಿಯಲ್ಲಿ ಪ್ರಾರ್ಥಿಸಿರುತ್ತಾರೆ.

ತದನಂತರ, ದಿನಾಂಕ.19.11.2020 ರಂದು ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಶ್ರೀ ವಿಕ್ಟರ್ ಸೈಮನ್, ಪಿಸಿ–6565 ಶ್ರೀ ದ್ಯಾವಪ್ಪ, ಎ.ಎಸ್.ಐ ಶ್ರೀ ಶಿವಣ್ಣ(ನಿವೃತ್ತ) ಹಾಗೂ ದೂರುದಾರರಾದ ಶ್ರೀ ವಿಜಯ್ ಕುಮಾರ್ ರವರರೊಂದಿಗೆ ಶ್ರೀ ಮಂಜುನಾಥ್(ನೊಂದ ವ್ಯಕ್ತಿ) ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ಮಂಜುನಾಥ್ ರವರು ಅವರ ಹೇಳಿಕೆಯನ್ನು ನೀಡಿರುತ್ತಾರೆ. ಪಿ.ಸಿ–6565 ಶ್ರೀ ದ್ಯಾವಪ್ಪ ಹಾಗೂ ಎ.ಎಸ್.ಐ ಶ್ರೀ ಶಿವಣ್ಣ(ನಿವೃತ್ತ) ರವರುಗಳು ಸಹ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಮುಂದುವರೆದು, ಸದರಿ ಪೊಲೀಸರು ಶ್ರೀ ಮಂಜುನಾಥ ರವರನ್ನು ದಿನಾಂಕ.03.12.2016 ರಂದು ಠಾಣೆಗೆ ಕರೆದುಕೊಂಡು ಹೋಗಿರುವುದಿಲ್ಲವೆಂದು ತಿಳಿಸಿದ್ದು, ದೂರುದಾರರಾದ ಶ್ರೀ ವಿಜಯ್‌ಕುಮಾರ್ ರವರು ಶ್ರೀ ಮಂಜುನಾಥ ರವರನ್ನು ಪೊಲೀಸರು ಕರೆದುಕೊಂಡು ಹೋದ ಜಾಗದ ಸಿಸಿ ಟಿವಿ ಪೂಟೇಜನ್ನು ಹಾಜರುಪಡಿಸುವುದಾಗಿ ತಿಳಿಸಿ, ಕಾಲಾವಕಾಶವನ್ನು ಕೋರಿರುತ್ತಾರೆ. ಹಾಗೂ ಆಯೋಗವು ಶ್ರೀ ಶಿವರಾಂ ಪ್ರಸಾದ್ ರವರನ್ನು ಹಾಜರುಪಡಿಸುವಂತೆ ದೂರುದಾರರಿಗೆ ಸೂಚಿಸಿರುತ್ತಾರೆ.

<u>ದಿನಾಂಕ.19.11.2020 ರಂದು ಆಯೋಗದ ಮುಂದೆ ಶ್ರೀ ಮಂಜುನಾಥ ರವರು ನೀಡಿರುವ ಹೇಳಿಕೆ ಕೆಳಕಂಡಂತೆ ಇದೆ:</u>

> "ಮೇಲ್ಕಂಡ ವಿಳಾಸದಲ್ಲಿ ನಾನು ನನ್ನ ತಂದೆ ತಾಯಿಯೊಂದಿಗೆ ವಾಸವಾಗಿದ್ದೇನೆ. ದಿನಾಂಕ.03.12.2016 ರಂದು ಸಂಜೆ ನಾನು ನಮ್ಮ ಮನೆಯಿಂದ ಹೆಚ್.ಎಸ್.ಆರ್ ಲೇಔಟ್‌ನಲ್ಲಿರುವ ನನ್ನ ಅಜ್ಜಿ ಮನೆಗೆ ಹೋಗಿ, ಸಂಜೆ ವಾಪಸ್ ಬರುತ್ತಿದ್ದಾಗ ಬಾಯಾರಿಕೆಯಾಯಿತು ಕುಡಿಯಲು ನೀರು ತೆಗೆದುಕೊಳ್ಳೋಣವೆಂದು ಬೇಕರಿ ಹತ್ತಿರ ಬೈಕ್ ಪಾರ್ಕ್ ಮಾಡುತ್ತಿದ್ದಾಗ ಹೊಯ್ಸಳ ಜೀಪ್‌ನಲ್ಲಿ ಇಬ್ಬರು ಪೊಲೀಸರು ಬಂದು ನನಗೆ ಇಷ್ಟೊತ್ತಿನಲ್ಲಿ ಇಲ್ಲಿ ಏನು ಮಾಡುತ್ತಿದ್ದೀಯಾ ಬಾ ಇಲ್ಲಿ ನೀನು ರೌಡಿ ತರ ಇದೀಯಾ ಎಂದು ಕೇಳಿದರು. ಅದಕ್ಕೆ ನಾನು ಅಜ್ಜಿ ಮನೆಗೆ ಹೋಗಿ ಬರುತ್ತಿದ್ದೇನೆ ಎಂದು ಹೇಳಿದಾಗ ಇಬ್ಬರು ಪೊಲೀಸರು(ಇಬ್ಬರು ಪೊಲೀಸರ ಹೆಸರು ಗೊತ್ತಿಲ್ಲ)ನನಗೆ ಹೊಡೆದು ನನ್ನ ಫೋನ್ ಮತ್ತು ನನ್ನ ಬೈಕ್ ಕೀ ಕಿತ್ತುಕೊಂಡರು. ನಂತರ ನನ್ನನ್ನು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಬಟ್ಟೆ ಬಿಚ್ಚಿಸಿ ಸೆಲ್‌ನಲ್ಲಿ ಕೂರಿಸಿದರು. ನಂತರ ನಾನು ಏನೂ ತಪ್ಪು ಮಾಡಿಲ್ಲ ನನ್ನನ್ನು ಬಿಟ್ಟು ಬಿಡಿ, ದಯವಿಟ್ಟು ಮನೆಗೆ ಕಳುಹಿಸಿ ಎಂದು ಎಷ್ಟು ಕೇಳಿದರು ಬಿಡಲಿಲ್ಲ.

ಮಾರನೇ ದಿನ ನನ್ನ ಮಾವ ಶ್ರೀ ವಿಜಯ್‌ಕುಮಾರ್ ರವರು ಪೊಲೀಸ್ ಠಾಣೆಗೆ ಬಂದರು. ಆದರೆ ನನ್ನನ್ನು ಭೇಟಿ ಮಾಡಲು ಪೊಲೀಸರು ಅವಕಾಶ ಮಾಡಿಕೊಡಲಿಲ್ಲ. ಆಗ ನನ್ನ ಮಾವ ಠಾಣೆಯ ಬಳಿ ಇದ್ದು, ಪೊಲೀಸರ ಮುಖಾಂತರ ಬೆಳಗಿನ ಉಪಹಾರ ಕೊಟ್ಟಿರುತ್ತಾರೆ. ನಂತರ ನನ್ನನ್ನು ಪೊಲೀಸರು ಠಾಣೆಯ 4ನೇ ಮಹಡಿಗೆ ಕರೆದುಕೊಂಡು ಹೋಗಿ ಮಂಚಕ್ಕೆ ನನ್ನ ಕೈ ಕಾಲುಗಳನ್ನು ಕಟ್ಟಿ ಹಾಕಿ, ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ಸೇರಿ 5 ಜನ ಪೊಲೀಸರು ತೊಡೆಗಳ ಮೇಲೆ ಕಬ್ಬಿಣದ ರಾಡ್ ಹಾಕಿ ರೋಲರ್ ಮಾಡಿ ಪಾದಗಳಿಗೆ ಲಾಠಿಯಿಂದ ಹೊಡೆದು ಕೆಟ್ಟ ಕೆಟ್ಟದಾಗಿ ಬೈದರು. ನನಗೆ ಹೊಡೆದ ಪೊಲೀಸರಲ್ಲಿ ಶ್ರೀ ಶಿವಣ್ಣ ಹಾಲಿ ನಿವೃತ್ತ ಎ.ಎಸ್.ಐ ರವರು ಸಹ ಇದ್ದರು. ಏನೋ ನೀನು ನೋಡೋಕೆ ಹೀಗಿದೀಯಾ ಎಷ್ಟು ಕೋಟಿಗೆ ಬೆಲೆ ಬಾಳುತ್ತೀಯಾ, ಹಾಗಾದರೆ ಒಂದು ಕೋಟಿ ತರಿಸು ಎಂದು ಅವಾಚ್ಯ ಶಬ್ದಗಳಿಂದ ಬೈದು ಮುಖಕ್ಕೆ, ಕಿವಿಗೆ ಕಾಲಿಗೆ ಬೂಟ್ ಕಾಲಿನಿಂದ ಹೊಡೆದಿರುತ್ತಾರೆ. ನಂತರ ಬಟ್ಟೆ ಬಿಚ್ಚಿಸಿ, ಓಡಾಡಲು ಹೇಳಿದರು, ನನಗೆ ಓಡಾಡಲು ಆಗುತ್ತಿಲ್ಲವೆಂದು ಹೇಳಿದರು ಬಿಡಲಿಲ್ಲ, ಓಡಾಡಿಸಿದರು. ನಂತರ ಕೆಳಗೆ ಕರೆದುಕೊಂಡು ಬಂದು ಸೆಲ್ ನಲ್ಲಿ ಹಾಕಿ ಒಂದು ಟ್ಯಾಬ್ಲೆಟ್ ಕೊಟ್ಟರು. ನನ್ನ ಕಾಲು ಊತ ವಿತ್ತು ಅದಕ್ಕೆ ಸ್ಪ್ರೇ ಮಾಡಿದರು.

ನನ್ನನ್ನು ಯಾವಾಗ ಠಾಣೆಯಿಂದ ಮನೆಗೆ ಕಳುಹಿಸಿದರು ಎನ್ನುವುದು ಸರಿಯಾಗಿ ನೆನಪಿಲ್ಲ. ಸಂಜೆ ನನ್ನ ಮಾವ ಶ್ರೀ ವಿಜಯ್‌ಕುಮಾರ್, ನನ್ನ ತಾಯಿ ಶ್ರೀಮತಿ ಅಂಜಲಿ, ನನ್ನ ಅಕ್ಕ ಅನುಪಮ ರವರು ಠಾಣೆಗೆ ಬಂದಾಗ ನನ್ನನ್ನು ಅವರ ಜೊತೆ ಸಂಜೆ 7.30 ಗಂಟೆಗೆ ಮನೆಗೆ ಕಳುಹಿಸಿಕೊಟ್ಟರು. ದಿನಾಂಕ ನನಗೆ ಜ್ಞಾಪಕವಿಲ್ಲ.

ನಂತರ ನನಗೆ ಆದ ಗಾಯಕ್ಕೆ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ಹೆಚ್ಚಿನ ಚಿಕಿತ್ಸೆಗಾಗಿ ವಿಲ್ಸನ್ ಗಾರ್ಡನ್‌ನಲ್ಲಿರುವ ಅಗಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ."

ದಿನಾಂಕ.19.11.2020 ರಂದು ಎ.ಎಸ್.ಐ ಶ್ರೀ ಶಿವಣ್ಣ(ನಿವೃತ್ತ) ರವರು ಹಾಗೂ ಪಿ.ಸಿ–6565 ಶ್ರೀ ದ್ಯಾವಪ್ಪ ರವರುಗಳ ಹಾಜರುಪಡಿಸಿರುವ ಲಿಖಿತ ಸಮಜಾಯಿಷಿಯಲ್ಲಿ ಶ್ರೀ ಶಿವರಾಂ ಪ್ರಸಾದ್ ರವರು ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ದಿನಾಂಕ.31.05.2019 ರಂದು ನಿವೃತ್ತಿ ಹೊಂದಿರುತ್ತಾರೆಂದು ಹಾಗೂ ಅರ್ಜಿದಾರರು ಆಯೋಗಕ್ಕೆ ನೀಡಿರುವ ಅರ್ಜಿಯಲ್ಲಿ ಹೆಚ್.ಎಸ್.ಆರ್.ಲೇಔಟ್ ಪೊಲೀಸ್ ಠಾಣೆಯ ಪಿ.ಐ ಮತ್ತು ಸಿಬ್ಬಂದಿಯವರ ವಿರುದ್ಧ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದುವುಗಳಾಗಿವೆಂದು, ದಿನಾಂಕ.05.12.2016 ರಂದು ಬೆಳಿಗ್ಗೆ 8–30 ಗಂಟೆಗೆ ಎ.ಎಸ್.ಐ ಶ್ರೀ ಶಿವಣ್ಣ ಹಾಗೂ ಶ್ರೀ ದ್ಯಾವಪ್ಪ ಪಿಸಿ

6565 ಕರ್ತವ್ಯಕ್ಕೆ ಹಾಜರಾಗಿದ್ದು, ನಮ್ಮಿಬ್ಬರನ್ನು ಠಾಣೆಯಲ್ಲಿ ಪತ್ತೆಯಾಗದ ಹಳೆಯ ಕಳವು ಪ್ರಕರಣಗಳಲ್ಲಿ ಆರೋಪಿ ಮತ್ತು ಮಾಲು ಪತ್ತೆಗಾಗಿ ಕರ್ತವ್ಯಕ್ಕೆ ನೇಮಿಸಿದ್ದು, ಅದರಂತೆ ಸುಮಾರು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣಾ ಸರಹದ್ದಿನ ಪರಂಗಿಪಾಳ್ಯದ ಮುಖ್ಯರಸ್ತೆಯಲ್ಲಿರುವ ಮಾರಮ್ಮ ದೇವಸ್ಥಾನದ ಸಮೀಪ, ಒಬ್ಬ ಆಸಾಮಿಯು ಸಾರ್ವಜನಿಕರನ್ನು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದು, ಸಾರ್ವಜನಿಕರ ನೆಮ್ಮದಿಗೆ ಭಂಗ ಉಂಟು ಮಾಡುತ್ತಿದ್ದ ಬಗ್ಗೆ ಆಸಾಮಿಯನ್ನು ಏಕೆ ಬೈಯುತ್ತಿದ್ದೀಯಾ ಎಂದು ವಿಚಾರ ಮಾಡಿದಾಗ ಸಮಂಜಸವಾದ ಉತ್ತರ ನೀಡದೆ ಇದ್ದರಿಂದ ನಾವಿಬ್ಬರೂ ಆತನನ್ನು ಠಾಣೆಗೆ ಕರೆತಂದು ಠಾಣಾಧಿಕಾರಿ ಶ್ರೀ ಚನ್ನೇಗೌಡ, ಎ.ಎಸ್.ಐ ರವರ ಎದುರು ಹಾಜರುಪಡಿಸಿ ಮುಂದಿನ ಕ್ರಮ ಜರುಗಿಸುವ ಸಲುವಾಗಿ ಲಿಖಿತ ವರದಿಯನ್ನು ನೀಡಿರುತ್ತೇವೆ. ಠಾಣಾಧಿಕಾರಿಗಳು ವರದಿಯನ್ನು ಸ್ವೀಕರಿಸಿ ಶ್ರೀ ಮಂಜುನಾಥ ಇವರ ವಿರುದ್ಧ ಕಲಂ 92(ಓ) ಮತ್ತು (ಆರ್) ಕರ್ನಾಟಕ ಪೊಲೀಸ್ ಆಕ್ಟ್ ಅಡಿಯಲ್ಲಿ ಪೊಲೀಸ್ ನೋಟೀಸ್ ಜಾರಿ ಮಾಡಿ ನಂತರ ಸದರಿ ಮಂಜುನಾಥ ಇವರ ವಿರುದ್ಧ ಒಂದು ಲಘು ಪ್ರಕರಣ ಸಂಖ್ಯೆ.532/2016 ರೀತ್ಯ ದಾಖಲಿಸಿರುತ್ತಾರೆ. ಈ ರೀತಿ ಕ್ರಮ ಜರುಗಿಸಿದ ಬಗ್ಗೆ ಠಾಣಾ ದಿನಚರಿಯಲ್ಲಿ ವಿವರವಾಗಿ ನಮೂದು ಮಾಡಲಾಗಿರುತ್ತದೆ. ಇದು ಸತ್ಯ ಸಂಗತಿಯಾಗಿರುತ್ತದೆ. ಆದರೆ, ಅರ್ಜಿದಾರರು ತಮ್ಮ ಅರ್ಜಿಯಲ್ಲಿ ತಿಳಿಸಿರುವಂತೆ ಶ್ರೀ ಮಂಜುನಾಥ ಇವರಿಗೆ ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ. ಹಾಗೂ ಲಾಕಪ್‌ನಲ್ಲಿ ಇಟ್ಟಿರುವುದಿಲ್ಲ. ಹಾಗೂ ಶ್ರೀ ಮಂಜುನಾಥ ಮತ್ತು ಆತನ ಮಾವನ ಮಗ ಶ್ರೀ ಶಿವರಾಂ ಪ್ರಸಾದ್ ರವರನ್ನು ಠಾಣೆಗೆ ಕರೆದುಕೊಂಡು ಬಂದು ಹಲ್ಲೆ ಮಾಡಿ ಲಾಕಪ್‌ನಲ್ಲಿ ಇಟ್ಟಿರುತ್ತಾರೆಂಬ ಆರೋಪವು ಸುಳ್ಳು ಆರೋಪವಾಗಿರುತ್ತದೆ. ಈ ಮೂಲಕ ಅರ್ಜಿದಾರರು ನಮ್ಮ ಮತ್ತು ಇತರ ಪೊಲೀಸ್ ಸಿಬ್ಬಂದಿಯವರ ವಿರುದ್ಧ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದವುಗಳು ಹಾಗೂ ಯಾವುದೋ ದುರುದ್ದೇಶದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಪೊಲೀಸರ ವಿರುದ್ಧ ಸುಳ್ಳು ಆರೋಪ ಮಾಡಿರುತ್ತಾರೆ. ಮೇಲಿನ ನಮ್ಮಗಳ ವಿವರಣೆಗಳನ್ನು ಮಾನ್ಯರು ಪರಿಗಣಿಸಿ ನಮ್ಮ ವಿರುದ್ಧ ಅರ್ಜಿದಾರರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದುವುಗಳೆಂದು ಪರಿಗಣಿಸಲು ಪ್ರಾರ್ಥಿಸಿರುತ್ತಾರೆ.

ದಿನಾಂಕ.18.01.2021 ರಂದು ದೂರುದಾರರಾದ ಶ್ರೀ ವಿಜಯ್‌ಕುಮಾರ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ರವರು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ವಿಜಯ್‌ಕುಮಾರ್ ರವರು ಶ್ರೀ ಶಿವರಾಂ ಪ್ರಸಾದ್ ರವರನ್ನು ಹಾಗೂ ದಿನಾಂಕ.03.12.2016 ರಂದು ಘಟನೆ ನಡೆದ ಬಗ್ಗೆ ವಿಡಿಯೋ ರೆಕಾರ್ಡ್‌ಡಿಂಗ್ ಅನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಶ್ರೀ ಶಿವರಾಂ ಪ್ರಸಾದ್ ರವರನ್ನು ಹಾಜರುಪಡಿಸಲು ಕಾಲಾವಕಾವಶವನ್ನು ಕೋರಿರುತ್ತಾರೆ. ದಿನಾಂಕ.05.12.2016 ರಂದು ಶ್ರೀ ಮಂಜುನಾಥ ರವರು ರಸ್ತೆಯಲ್ಲಿ ಗಲಾಟೆ ಸೃಷ್ಟಿಸಿ, 4 ಚಕ್ರದ

ವಾಹನಕ್ಕೆ ಗುದ್ದಿದ್ದು, ಆ ವಾಹನವು ಶ್ರೀ ಚೇತನರವರದಾಗಿರುತ್ತದೆಂದು ಆಯೋಗದ ಮುಂದೆ ಶ್ರೀ ವಿಕ್ಟರ್ ಸೈಮನ್ ರವರು ಹೇಳಿರುತ್ತಾರೆ. ಆದ್ದರಿಂದ ಶ್ರೀ ವಿಕ್ಟರ್ ಸೈಮನ್ ರವರಿಗೆ ಶ್ರೀ ಚೇತನ್ ರವರನ್ನು ಆಯೋಗದ ಮುಂದೆ ಹಾಜರುಪಡಿಸಲು ಸೂಚಿಸಿ, ಮುಂದಿನ ದಿನಾಂಕವನ್ನು ನೀಡಿಲಾಗಿರುತ್ತಾರೆ.

ದಿನಾಂಕ.29.03.2021 ರಂದು ಶ್ರೀ ಮಂಜುನಾಥ್ ರವರು ಮಾತ್ರ ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ವಿಜಯ್‌ಕುಮಾರ್ ರವರು ಶ್ರೀ ಶಿವರಾಂ ಪ್ರಸಾದ್ ರವರನ್ನು ಸಹ ಹಾಜರು ಪಡಿಸದೇ ಇದ್ದುದರಿಂದ ಶ್ರೀ ಮಂಜುನಾಥ್ ರವರು ಇನ್ನೊಂದು ದಿನ ಶ್ರೀ ಶಿವರಾಂ ಪ್ರಸಾದ್ ರವರನ್ನು ಹಾಜರಾಗಲು ಕಾಲಾವಕಾಶ ಕೋರಿರುತ್ತಾರೆ. ಮುಂದುವರೆದು, ಶ್ರೀ ವಿಕ್ಟರ್ ಸೈಮನ್ ರವರಿಗೆ ಶ್ರೀ ಚೇತನ್ ರವರನ್ನು ಹಾಜರುಪಡಿಸುವಂತೆ ಸೂಚಿಸಲಾಗಿದ್ದು, ಅವರು ಆಯೋಗದ ಮುಂದೆ ಹಾಜರಾಗಿರುವುದಿಲ್ಲ. ಶ್ರೀ ವಿಕ್ಟರ್ ಸೈಮನ್ ರವರು ಮತ್ತೊಂದು ಪ್ರಕರಣದಲ್ಲಿ ಬಂಧಿಸಿದ್ದು ಜೈಲಿನಲ್ಲಿದ್ದಾರೆಂದು ವರದಿಯಾಗಿದೆ. ಆದ್ದರಿಂದ ಶ್ರೀ ಚೇತನ್ ರವರನ್ನು ಆಯೋಗದ ಮುಂದೆ ಹಾಜರುಪಡಿಸುವಂತೆ ಶ್ರೀ ವಿಕ್ಟರ್ ಸೈಮನ್ ರವರ ಪರವಾಗಿ ಶ್ರೀ ಶಿವಣ್ಣ ಹಾಗೂ ಶ್ರೀ ದ್ಯಾವಪ್ಪ ರವರಿಗೆ ಸೂಚಿಲಾಗಿದೆ.

<u>ದಿನಾಂಕ.29.03.2021ರಂದು ಆಯೋಗದ ಮುಂದೆ ಶ್ರೀ ಮಂಜುನಾಥ ರವರು ಅವರ ಮುಂದುವರೆದ ಹೇಳಿಕೆಯನ್ನು ಕೆಳಕಂಡಂತೆ ನೀಡಿರುತ್ತಾರೆ:</u>

> ಶ್ರೀ ಮಂಜುನಾಥ್ ರವರು ದಿನಾಂಕ.19.11.2020ರಂದು ನೀಡಿದ ಹೇಳಿಕೆಯಲ್ಲಿ ಅವರನ್ನು ಪೊಲೀಸ್ ಇನ್ಸ್‌ಪೆಕ್ಟರ್ ರವರು 4ನೇ ಮಹಡಿಗೆ ಕರೆದುಕೊಂಡು ಹೋಗಿದ್ದಾರೆಂದು ನುಡಿದಿರುತ್ತಾರೆ. ಆದರೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ರವರು ಹೆಚ್.ಎಸ್.ಆರ್. ಪೊಲೀಸ್ ಠಾಣೆಯಲ್ಲಿ 4ನೇ ಮಹಡಿ ಇರುವುದಿಲ್ಲ ಎಂದು ಕೇಳಿದಾಗ, ಶ್ರೀ ಮಂಜುನಾಥ್ ರವರು ನನಗೆ ಯಾವ ಮಹಡಿಗೆ ಕರೆದುಕೊಂಡು ಹೋದರು ಎಂದು ಹೇಳುವುದಕ್ಕೆ ಆಗುವುದಿಲ್ಲ. ಒಟ್ಟಾರೆ, ಅವರು ನನ್ನನ್ನು ಮೇಲೆ ಇರುವ ಮಹಡಿಗೆ ಕರೆದುಕೊಂಡು ಹೋದರು."

ದಿನಾಂಕ 17.07.2021 ರಂದು ನಿವೃತ್ತ ಎ.ಎಸ್.ಐ. ಶ್ರೀ ಶಿವಣ್ಣ ರವರು ಮಾತ್ರ ಆಯೋಗದ ಮುಂದೆ ಹಾಜರಿಗಿದ್ದರು. ಶ್ರೀ ವಿಕ್ಟರ್ ಸೈಮನ್, ಪಿ.ಐ. ರವರು COVID ನಿಂದ ಬಳಲುತ್ತಿದ್ದು, ಆಯೋಗಕ್ಕೆ ಬರಲು ಸಾಧ್ಯವಾಗುತ್ತಿಲ್ಲವೆಂದು ದೂರವಾಣಿಯ ಮೂಲಕ ತಿಳಸಿದ್ದಾರೆ. ದೂರುದಾರರಾದ ಶ್ರೀ ವಿಜಯ್ ಕುಮಾರ್ ಹಾಗೂ ಶ್ರೀ ದ್ಯಾವಪ್ಪ ಪಿ.ಸಿ–6565 ರವರು ಆಯೋಗಕ್ಕೆ

ಬರುತ್ತೇನೆಂದು ತಿಳಿಸಿದ್ದು, ಗೈರಾಜರು ಆಗಿರುತ್ತಾರೆ. ದಿನಾಂಕ 05.12.2016 ರಂದು ಶ್ರೀ ಮಂಜುನಾಥ ರವರು ಶ್ರೀ ಚೇತನ್ ರವರ ನಾಲ್ಕು ಚಕ್ರದ ವಾಹನಕ್ಕೆ ಒದ್ದಿರುತ್ತಾರೆಂದು ಹಾಗೂ ಆ ವಿಚಾರವಾಗಿ ಶ್ರೀ ಚೇತನ್ ರವರನ್ನು ಆಯೋಗದ ಮುಂದೆ ಹಾಜರುಪಡಿಸುತ್ತೇನೆಂದು ಶ್ರೀ ವಿಕ್ಟರ್ ಸೈಮನ್, ಪಿ.ಐ. ರವರು ಹೇಳಿದ್ದು, ಈ ಬಗ್ಗೆ ನಿವೃತ್ತ ಎ.ಎಸ್.ಐ. ಶ್ರೀ ಶಿವಣ್ಣ ರವರು ಆಯೋಗದ ಮುಂದೆ ಹೇಳಿಕೆ ನೀಡಿರುತ್ತಾರೆ.

<u>ದಿನಾಂಕ.17.07.2021ರಂದು ಆಯೋಗದ ಮುಂದೆ ಶ್ರೀ ಶಿವಣ್ಣ ನಿವೃತ್ತ ಎ.ಎಸ್.ಐ ರವರು ಅವರ ಹೇಳಿಕೆಯನ್ನು ಕೆಳಕಂಡಂತೆ ನೀಡಿರುತ್ತಾರೆ:</u>

> "ನಾನು 05/12/2016 ರಂದು ಶ್ರೀ ದ್ಯಾವಪ್ಪ 6565 ರವರೊಂದಿಗೆ ಠಾಣೆಯಲ್ಲಿ ಪತ್ತೆಯಾಗದ ಹಳೆಯ ಪ್ರಕರಣಗಳಲ್ಲಿ ಆರೋಪಿ ಮತ್ತು ಮಾಲು ಪತ್ತೆಗಾಗಿ ಹೋಗುತ್ತಾ ಇರುವಾಗ ಬೆಳಿಗ್ಗೆ 10.30 ಘಂಟೆ ಸಮಯದಲ್ಲಿ, ಅಂದಿನ ಹೆಚ್.ಎಸ್.ಆರ್ ಲೇಔಟ್ ಪೋಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ರವರು ಫೋನಿನಲ್ಲಿ ಸೂಚಿಸಿದ ಮೇರೆಗೆ ಹೆಚ್.ಎಸ್.ಆರ್ ಲೇಔಟ್ ಪೋಲೀಸ್ ಠಾಣೆಯ ಸರಹದ್ದಿನ ಪರಂಗಿಪಾಳ್ಯ ಮುಖ್ಯ ರಸ್ತೆಯಲ್ಲಿರುವ ಮಾರಮ್ಮ ದೇವಸ್ಥಾನದ ಹತ್ತಿರ ಹೋದಾಗ ಒಬ್ಬ ಅಸಾಮಿ, ಅವರ ಹೆಸರು ಶ್ರೀ ಮಂಜುನಾಥ್ ಅಂತ ಆಮೇಲೆ ತಿಳಿದು ಬಂತು, ಸಾರ್ವಜನಿಕ ರಸ್ತೆ ಮೇಲೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಈ ವಿಷಯದ ಬಗ್ಗೆ ಶ್ರೀ ವಿಕ್ಟರ್ ಸೈಮನ್ ರವರು ಹೇಳಿದಂತೆ ಶ್ರೀ ಮಂಜುನಾಥ್ ರವರನ್ನು ನಾನು ಮತ್ತು ಶ್ರೀ ದ್ಯಾವಪ್ಪ ರವರು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಶ್ರೀ ಮಂಜುನಾಥ್ ರವರ ಮೇಲೆ ಪೊಲೀಸ್ ಠಾಣೆಯ ಎಸ್.ಹೆಚ್.ಓ ಶ್ರೀ ಚನ್ನೇಗೌಡ, ಎ.ಎಸ್.ಐ ರವರಿಗೆ ಒಂದು ವರದಿ ಕೊಟ್ಟಿದ್ದೆ. ಪೊಲೀಸ್ ಇನ್ಸ್‌ಪೆಕ್ಟರ್ ಆದ ಶ್ರೀ ವಿಕ್ಟರ್ ಸೈಮನ್ ರವರು ಆಯೋಗದ ಮುಂದೆ ಶ್ರೀ ಚೇತನ್ ಅಂತ ಒಬ್ಬ ವ್ಯಕ್ತಿಯ ಕಾರಿಗೆ ಶ್ರೀ ಮಂಜುನಾಥ್ ಅವರು ಒದಿದ್ದು, ಇದರ ಬಗ್ಗೆ ಶ್ರೀ ಚೇತನ್ ರವರನ್ನು ಆಯೋಗದ ಮುಂದೆ ಹಾಜರು ಪಡಿಸುತ್ತಾರೆಂದು ಹೇಳಲಾದ ಶ್ರೀ ಚೇತನ್ ರವರ ಬಗ್ಗೆ ನನಗೆ ಏನು ಮಾಹಿತಿ ಇಲ್ಲ."

ದೂರರ್ಜಿ, ವರದಿ, ಹೇಳಿಕೆಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ, ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ಹಾಗೂ ಪೊಲೀಸ್ ಸಿಬ್ಬಂದಿಗಳು, ನೊಂದವ್ಯಕ್ತಿ ಶ್ರೀ ಮಂಜುನಾಥನನ್ನು ದಿನಾಂಕ.03.12.2016 ರಂದು ರಾತ್ರಿ 11.00 ಗಂಟೆಯಿಂದ ದಿನಾಂಕ.05.12.2016 ರಂದು ಸಂಜೆ 6.30 ರವರೆಗೆ ಠಾಣೆಯಲ್ಲಿ ಅಕ್ರಮ ಬಂಧನದಲ್ಲಿರಿಸಿ ಹಲ್ಲೆ ಮಾಡಿರುವ ಬಗ್ಗೆ ದೂರುದಾರರಾದ ಶ್ರೀ ವಿಜಯ್ ಕುಮಾರ್ ಹಾಗೂ ನೊಂದ ವ್ಯಕ್ತಿ ಮಂಜುನಾಥ ರವರ ಹೇಳಿಕೆಗಳಿಂದ ಕಂಡು ಬರುತ್ತದೆ. ದಿನಾಂಕ 04.12.2016 ಹಾಗೂ

05.12.2016 ರಂದು ಶ್ರೀ ಮಂಜುನಾಥ ರವರನ್ನು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಲಾಕಪ್‌ನಲ್ಲಿ ನೋಡಿರುವುದಾಗಿ ಹಾಗೂ ಆತನಿಗೆ ತಿಂಡಿ ಕೊಡಿಸಿರುವುದಾಗಿ ಹಾಗೂ ದಿನಾಂಕ 04.12.2016 ಹಾಗೂ 05.12.2016 ರಂದು ಶ್ರೀ ವಿಕ್ಟರ್ ಸೈಮನ್, ಪಿ.ಐ. ರವರನ್ನು ಭೇಟಿ ಮಾಡಿದ್ದು, ದಿನಾಂಕ 05.12.2016 ರಂದು ಸಂಜೆ 6.00ಗಂಟೆಯಲ್ಲಿ ಶ್ರೀ ವಿಕ್ಟರ್ ಸೈಮನ್, ಪಿ.ಐ. ರವರು ಶ್ರೀ ಮಂಜುನಾಥನನ್ನು ಶ್ರೀ ಪೊನ್ನಯ್ಯ ಹಾಗೂ ಶ್ರೀ ರಮೇಶ ರವರೊಂದಿಗೆ ಕಳುಹಿಸಿಕೊಟ್ಟಿದ್ದಾಗೀ ಪ್ರತ್ಯಕ್ಷ ಸಾಕ್ಷಿಯಾದ ಶ್ರೀ ರಮೇಶ ರವರು ಆಯೋಗದ ಡಿವೈ.ಎಸ್.ಪಿರವರ ಮುಂದೆ ಹೇಳಿಕೆಯನ್ನು ನೀಡಿರುವುದು ಕಂಡು ಬಂದಿರುತ್ತದೆ. ಶ್ರೀ ಶಿವರಾಂ ಪ್ರಸಾದ್ ರವರು ದಿನಾಂಕ.03.12.2016 ರಂದು ಆತನನ್ನು ಠಾಣೆಗೆ ಕರೆದುಕೊಂಡು ಹೋಗಿಲ್ಲವೆಂದು ಹಾಗೂ ಶ್ರೀ ಮಂಜುನಾಥ ರವರನ್ನು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪೊಲೀಸರು ದಿನಾಂಕ.03.12.2016ರಂದು ರಾತ್ರಿ ವೇಳೆ ಠಾಣೆಯಲ್ಲಿ ಕರೆದುಕೊಂಡು ಹೋಗಿರುತ್ತಾರೆಂಬ ಮಾಹಿತಿಯ ಮೇರೆಗೆ ದಿನಾಂಕ.04.12.2016ರಂದು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಗೆ ಭೇಟಿ ಮಾಡಿ ಠಾಣೆಯೊಳಗೆ ನೋಡಿದ್ದು, ಆಗ ಶ್ರೀ ಮಂಜುನಾಥ ರವರು ಲಾಕಪ್‌ನಲ್ಲಿದ್ದರೆಂದು ಶ್ರೀ ಶಿವರಾಂ ಪ್ರಸಾದ್ ರವರು ಆಯೋಗದ ಡಿವೈ.ಎಸ್.ಪಿರವರ ಮುಂದೆ ಹೇಳಿಕೆಯನ್ನು ನೀಡಿರುವುದು ಕಂಡು ಬಂದಿರುತ್ತದೆ.

ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ರವರು ಆಯೋಗದ ಮುಂದೆ ಶ್ರೀ ಮಂಜುನಾಥ ರವರು ಶ್ರೀ ಚೇತನ್ ರವರ 4 ಚಕ್ರದ ವಾಹನಕ್ಕೆ ಒದ್ದಿರುತ್ತಾರೆಂದು ತಿಳಿಸಿದ್ದು, ದಿನಾಂಕ.05.12.2016ರ ಎಸ್.ಹೆಚ್.ಡಿ ಯಲ್ಲಿ ಶ್ರೀ ಮಂಜುನಾಥ ರವರು ಸಾರ್ವಜನಿಕ ರಸ್ತೆಯಲ್ಲಿ ಹೋಗಿ ಬರುವ ಜನರಿಗೆ ತೊಂದರೆ ನೀಡುತ್ತಿದ್ದು, ಬಾಯಿಗೆ ಬಂದ ಹಾಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದಾರೆ ಎಂಬ ಕೊಟ್ಟ ದೂರನ್ನು ಪಡೆದು ಲಘು ಪ್ರಕರಣ ಸಂಖ್ಯೆ.532/2016 ರೀತ್ಯ ದಾಖಲಾಗಿರುವುದು ಕಂಡು ಬರುತ್ತದೆ ಹಾಗೂ ಶ್ರೀ ಶಿವಣ್ಣ ಎ.ಎಸ್.ಐ(ನಿವೃತ್ತ) ರವರ ದಿನಾಂಕ.17.07.2021ರ ಹೇಳಿಕೆಯಲ್ಲಿ ಶ್ರೀ ವಿಕ್ಟರ್ ಸೈಮನ್ ರವರ ಮೌಖಿಕ ಆದೇಶದ ಮೇಲೆ ಶ್ರೀ ಮಂಜುನಾಥ ರವರನ್ನು ದಿನಾಂಕ.05.12.2016 ರಂದು ಠಾಣೆಗೆ ಕರೆದುಕೊಂಡು ಬಂದು ವರದಿ ನೀಡಿರುವುದಾಗಿ ಹಾಗೂ ಶ್ರೀ ಚೇತನ್ ರವರ ಬಗ್ಗೆ ಶ್ರೀ ಶಿವಣ್ಣ ರವರಿಗೆ ಯಾವುದೇ ಮಾಹಿತಿ ಇಲ್ಲವೆಂದು ಕಂಡು ಬಂದಿರುತ್ತದೆ.

ಮುಂದುವರೆದು, ಶ್ರೀ ಮಂಜುನಾಥ ರವರ ಎಂ.ಎಲ್.ಸಿಯ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ ರವರು ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡು ಬರುತ್ತದೆ.

ಶ್ರೀ ಮಂಜುನಾಥ ರವರನ್ನು ದಿನಾಂಕ.03.12.2016 ರಂದು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಗೆ ಕರೆತಂದು ಹಾಗೂ ದಿನಾಂಕ.04.12.2016 ಮತ್ತು 05.12.2016 ರಂದು ಶ್ರೀ ಮಂಜುನಾಥ ರವರನ್ನು ಪೊಲೀಸ್ ಠಾಣೆಯಲ್ಲಿಯೇ ಇಟ್ಟಿರುವುದು ಹಾಗೂ ದಿನಾಂಕ.05.12.2016 ರಂದು ಸಂಜೆ 06.30 ಗಂಟೆಗೆ ಶ್ರೀ ಮಂಜುನಾಥ ರವರನ್ನು ಕಳುಹಿಸಿಕೊಟ್ಟಿರುವುದು ಮೇಲೆ ಹೇಳಲಾದ ಸಾಕ್ಷ್ಯಗಳಿಂದ ಕಂಡು ಬರುತ್ತದೆ. ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್, ಶ್ರೀ ಶಿವಣ್ಣ ಎ.ಎಸ್.ಐ(ನಿವೃತ್ತ) ಹಾಗೂ ಪಿ.ಸಿ–6565 ಶ್ರೀ ದ್ಯಾವಪ್ಪ ರವರ ಹೇಳಿಕೆಗಳಲ್ಲಿ ಶ್ರೀ ಮಂಜುನಾಥ ರವರನ್ನು ದಿನಾಂಕ.05.12.2016 ರಂದು ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಗೆ ಕರೆತರಲಾಯಿತ್ತೆಂದು ನುಡಿದಿರುತ್ತಾರೆ. ಆದರೆ ಸ್ವತಂತ್ರ ಸಾಕ್ಷಿಗಳಾದ ಶ್ರೀ ರಮೇಶ್ ಮತ್ತು ಶ್ರೀ ಪೊನ್ನಯ್ಯ ಹಾಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೀಡಿರುವ ಎಂ.ಎಲ್.ಸಿ ಯಲ್ಲಿ ಶ್ರೀ ಮಂಜುನಾಥ ರವರನ್ನು ದಿನಾಂಕ.03.12.2016 ರಂದು ಪೊಲೀಸ್ ಠಾಣೆಗೆ ಕರೆತಂದಿರುತ್ತಾರೆಂದು ಸ್ಪಷ್ಟವಾಗಿ ಕಂಡುಬರುತ್ತದೆ ಹಾಗೂ ಶ್ರೀ ಮಂಜುನಾಥರವರನ್ನು ದಿನಾಂಕ.05.12.2016ರವರೆಗೆ ಅಕ್ರಮ ಬಂಧನದಲ್ಲಿಟ್ಟು, ಅಕ್ರಮ ಬಂಧನದಲ್ಲಿರಿಸಿದಲ್ಲದೆ ಶ್ರೀ ಮಂಜುನಾಥ ರವರಿಗೆ ದೈಹಿಕ ಹಲ್ಲೆ ಹಾಗೂ ಹಿಂಸೆಗೆ ಒಳಪಡಿಸಿರುತ್ತಾರೆ.

ಆದಾಗ್ಯು, ಶ್ರೀ ವಿಕ್ಟರ್ ಸೈಮನ್ ರವರು ಆಯೋಗದ ಮುಂದೆ ಶ್ರೀ ಮಂಜುನಾಥ ರವರು ದಿನಾಂಕ.05.12.2016 ರಂದು ಒಬ್ಬ ಶ್ರೀ ಚೇತನ್ ರವರ ಕಾರಿಗೆ ಒದ್ದಿದ್ದರು ಎಂಬುದಾಗಿ ಹೇಳಿದ್ದು, ಹಾಗೂ ಶ್ರೀ ಚೇತನ್ ರವರನ್ನು ಆಯೋಗದ ಮುಂದೆ ಹಾಜರುಪಡಿಸಲಾಗುವುದು ಎಂದು ಹೇಳಿರುತ್ತಾರೆ. ಆದರೆ ಶ್ರೀ ಚೇತನ್ ರವರನ್ನು ಆಯೋಗದ ಮುಂದೆ ಹಾಜರುಪಡಿಸಿರುವುದಿಲ್ಲ ಮತ್ತು ದಿನಾಂಕ.05.12.2016 ರಂದು ಶ್ರೀ ಮಂಜುನಾಥ ರವರನ್ನು ಘಟನಾ ಸ್ಥಳದಿಂದ ಪೊಲೀಸ್ ಠಾಣೆಗೆ ಕರೆತಂದ ಶ್ರೀ ಶಿವಣ್ಣ ಎ.ಎಸ್.ಐ(ನಿವೃತ್ತ) ರವರು, ಆಯೋಗದ ಮುಂದೆ ನೀಡಿರುವ ಹೇಳಿಕೆಯಲ್ಲಿ ಶ್ರೀ ಚೇತನ್ ರವರು ಯಾರೆಂದು ನನಗೆ ತಿಳಿದಿಲ್ಲವೆಂದು ನುಡಿದಿರುತ್ತಾರೆ.

ಆದ್ದರಿಂದ, ಶ್ರೀ ಮಂಜುನಾಥ ರವರ ಅಕ್ರಮ ಬಂಧನದಲ್ಲಿರುವುದನ್ನು ಮರೆಮಾಚಲು ಶ್ರೀ ವಿಕ್ಟರ್ ಸೈಮನ್, ಶ್ರೀ ಶಿವಣ್ಣ ಎ.ಎಸ್.ಐ(ನಿವೃತ್ತ) ಹಾಗೂ ಪಿಸಿ–6565 ಶ್ರೀ ದ್ಯಾವಪ್ಪ ರವರು ದಿನಾಂಕ.05.12.2016 ರಂದು ಶ್ರೀ ಮಂಜುನಾಥ ರವರು ರಸ್ತೆಯಲ್ಲಿ ಗಲಾಟೆಯನ್ನು ಸೃಷ್ಟಿಸಿರುತ್ತಾರೆಂದು ಹಾಗೂ ಇದರಿಂದ ಶ್ರೀ ಮಂಜುನಾಥ ರವರನ್ನು ಪೊಲೀಸ್ ಠಾಣೆಗೆ ಕರೆತಂದು ಅವರ ವಿರುದ್ಧ ಸುಳ್ಳು ಲಘು ಪ್ರಕರಣವನ್ನು ದಾಖಲಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಅಂಶಗಳಿಂದ, ಶ್ರೀ ಮಂಜುನಾಥ ರವರಿಗೆ ಮಾನವ ಹಕ್ಕು ಉಲ್ಲಂಘನೆಯಾಗಿರುವುದು ಘೋರಾಪರಾಧವೆಂದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಅದ್ದರಿಂದ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

*ನೊಂದ ವ್ಯಕ್ತಿಯಾದ ಶ್ರೀ ಮಂಜುನಾಥ ರವರಿಗೆ ರೂ. 25,000/- (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಜರೂರಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಅಂದಿನ ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ (ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್ ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್) ಶ್ರೀ ದ್ಯಾವಪ್ಪ ಪಿಸಿ-6565(ಹಾಲಿ ಹೆಚ್.ಸಿ-9585 ಕಾಡುಗೋಡಿ ಪೊಲೀಸ್ ಠಾಣೆ) ಹಾಗೂ ಶ್ರೀ ಶಿವಣ್ಣ ಎ.ಎಸ್.ಐ(ನಿವೃತ್ತ) ರವರುಗಳ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿಕ್ಟರ್ ಸೈಮನ್ (ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್ ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್) ಶ್ರೀ ದ್ಯಾವಪ್ಪ ಪಿಸಿ-6565(ಹಾಲಿ ಹೆಚ್.ಸಿ-9585 ಕಾಡುಗೋಡಿ ಪೊಲೀಸ್ ಠಾಣೆ) ಹಾಗೂ ಶ್ರೀ ಶಿವಣ್ಣ ಎ.ಎಸ್.ಐ(ನಿವೃತ್ತ) ರವರುಗಳ ವೇತನದಿಂದ ಅಥವಾ ನಿವೃತ್ತಿ ವೇತನದಿಂದ ಸಮನಾಗಿ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.*

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು.

ಮುಂದುವರೆದು, ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರುಗಳು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ:29–09–2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.